**3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**

**ಬೆಂಗಳೂರು ನಗರ.**

**ಸಿಸಿ. 5239/2020**

ಚಾಸಾ- 4 ಪ್ರಾಸಾ-1

| | |
|---|---|
| **ಸಾಕ್ಷಿದಾರರ ಹೆಸರು** | ಶೇಷ ರಾಮ್ |
| **ತಂದೆಯ ಹೆಸರು** | ಪುಕರಾಮ್ |
| **ವಯಸ್ಸು** | 62 ವರ್ಷ |
| **ಉದ್ಯೋಗ** | ವ್ಯಾಪಾರ |
| **ವಾಸ** | ಕುರುಬರ ಹಳ್ಳಿ , ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 13.02.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

2016 ರಲ್ಲಿ ಪೊಲೀಸರು ಕೋರಮಂಗಲದ ಅಂಬೇಡ್ಕರ ನಗರದ,10 ನೇ ಕ್ರಾಸ್ ನಲ್ಲಿರುವ ರವಿ ಡಿಪೋ ಇವರ ಅಂಗಡಿಗೆ ಬಂದಿದ್ದರು. ಪರಿಶೀಲನೆ ಮಾಡಿ ಮಧ್ಯಾಹ್ನ 02.00 ಅಥವಾ 3.00 ಗಂಟೆಯಿಂದ 04.00 ಗಂಟೆವರೆಗೆ ಇದ್ದರು. ನಾನು ಅವರ ಮಾಡಿದ ಬರವಣಿಗೆಗೆ ನನ್ನ ಸಹಿ ಮಾಡಿರುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಸದರಿ ದಾಖಲೆ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನನ್ನ ಜೊತೆ ಚಾಸಾ-3 ಮುನಿಸ್ವಾಮಿ ಹಾಜರಿದ್ದರು ಅವರು ಸಹ ಸಹಿ ಮಾಡಿರುತ್ತಾರೆ. ರೇಶನ್ ಸಲುವಾಗಿ ಪಡಿತರ ಚೀಟಿದಾರರಿಗೆ ಟೋಕನ್ ಗಳನ್ನು ವಿತರಿಸುವ ಸ್ಥಳಕ್ಕೆ ಪೊಲೀಸರು ಬಂದಿದ್ದರು.

**ಪಾಟೀ ಸವಾಲು : ಶ್ರೀ ವಕೀಲರಿಂದ ಆರೋಪಿ ಪರ ಃ ಆರೋಪಿ ಪರ ವಕೀಲರು ಹಿರಿಯ ವಕೀಲರು ಬರುತ್ತಾರೆ ಅಂತ ಮಧ್ಯಾಹ್ನದ ವರೆಗೆ ಕಾಲವಕಾಶ ಕೋರಿರುತ್ತಾರೆ. ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಸಾಕ್ಷಿಯನ್ನುಪುನಃ ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ ಎನ್ ಎಂ ವಕೀಲರಿಂದ ಆರೋಪಿ ಪರ ಃ**

ಸದರಿ ಘಟನೆ ಯಾವ ತಾರೀಖಿನಂದು ಆಗಿರುತ್ತದೆ ಎಂದು ಗೊತ್ತಿಲ್ಲ. ಯಾವ ವಿಚಾರಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. 10 ನೇ ಕ್ರಾಸ್, ಅಂಬೇಡ್ಕರ ನಗರ, ಕೋರಮಂಗಲ, ಬೆಂಗಳೂರಿನಲ್ಲಿ ಪೊಲೀಸರು ಬಂದಿದ್ದರು. ರೇಶನ್ ಡಿಪೊವನ್ನು ನಡೆಸುತ್ತಿದ್ದವರು ರವಿ ಅಂತ ಗೊತ್ತು, ಪೂರ್ಣ ಹೆಸರು ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಅಲ್ಲಿ ಇದ್ದರು. ಆದರೆ ಅವರು ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ರೇಶನ್ ಕಾರ್ಡ್ ಸಹ ಅದೇ ಡಿಪೋದಲ್ಲಿತ್ತು ಆದರೆ ಈಗ ಇರುವುದಿಲ್ಲ. 18 ವರ್ಷಗಳವರೆಗೆ ನನ್ನ ರೇಶನ್ ಕಾರ್ಡ್ ಆ ಡಿಪೋದಲ್ಲಿತ್ತು. 18 ವರ್ಷ ನಮಗೆ ಸರಿಯಾಗಿ ರೇಶನ್ ಕೊಟ್ಟಿರುತ್ತಾರೆ. ಯಾವುದೇ ತೊಂದರೆ ಮಾಡಿಲ್ಲ. ಪೊಲೀಸರು ಕರೆದು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಏನು ಬರೆದಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುವುದು ಸರಿ. ನನಗೆ ವಿಚಾರ ಏನು ಗೊತ್ತಿಲ್ಲ ಪೊಲೀಸರು ಹೇಳಿದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)**

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**

ಚಾಸಾ-4 ಪ್ರಾಸಾ-1